ಗಮನಕ್ಕೆ ಬಂದಿಲ್ಲ ಎಂದು ಹೇಳಿದ್ದೀರಿ. ಟೌನ್ ಸರಹದ್ದಿನಲ್ಲಿ ಚರಂಡಿ ಬಿಟ್ಟು ರಸ್ತೆ ಎಷ್ಟು ಆಗಲ ಇದೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಕಾಗೋಡು ತಿಮ್ಮಪ್ಪ.—ಸಾಮಾನ್ಯವಾಗಿ ರಸ್ತೆಗಳು ಚಿಕ್ಕದಾಗಿರುತ್ತವೆ.

ಶ್ರೀ ಡಿ.ಟಿ. ಮಾಯಣ್ಣ —ಬಸ್ಸುಗಳು ಬಂದರೆ ಸೇತುವೆಯನ್ನು ದಾಟುವವರೆಗೂ ಆ ಕಡೆ ಈ ಕಡೆ ನಿಂತಿರುತ್ತವೆ ಏಕಮುಖವಾದ ರಸ್ತೆಯನ್ನಾಗಲೀ ಇಲ್ಲವೇ ಬೈಪಾಸ್ ರಸ್ತೆಯನ್ನಾಗಲೀ ಮಾಡದೇ ಹೋದರೆ. ಅಪಘಾತಗಳು ಜಾಸ್ತಿಯಾಗಂತ್ತವೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ಎರಡು ಸಲಹೆಗಳನ್ನು ಇಲ್ಲಿ ಪರಿಶೀಲನೆ ಮಾಡಿದ್ದಾರೆ. ಒಂದು ಕೋಟಿ ೧೫ ಲಕ್ಷ ರೂಪಾಯಿಂಗಳ ಒಂದು ಯೋಜನೆ ಇನ್ನೊಂದು ೭೧.೨೫ ಲಕ್ಷ ರೂಪಾಯೀಗಳ ಯೋಜನೆ. ಇಲ್ಲಿರತಕ್ಕ ಸಮಸ್ಯೆ ಎಂದರೆ ಜಮೀನು ಸಿಗುವುದು ಕಷ್ಟವಾಗಿದೆ, ತಾವು ತಮ್ಮ ಪ್ರಭಾವವನ್ನು ಬೀರಿ ಜಮೀನನು ಒದಗಿಸಿಕೊಟ್ಟರೆ ತಕ್ಷಣ ಕೆಲಸ ಪ್ರಾರಂಭಿಸುತ್ತೇವೆ.

ಶ್ರೀ ಡಿ.ಟಿ, ಮಾಯಣ್ಣ.—ಬೈಪಾಸ್ ರಸ್ತೆ ಮಾಡಿಸುವುದಕ್ಕೆ ಹೊರಟರೆ ಜಮೀನಂ ಅಕ್ವಿಜಿಷನ್ ನಿಂದ ನಿಧಾನವಾಗಬಹುದು. ಅಲ್ಲಿಯವರೆಗೆ ಏಕಮುಖವಾದ ರಸ್ತೆ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ.—ನಮ್ಮ ಇಲಾಖೆಗೆ ಸೇರಿದಂಥ ರಸ್ತೆ ಇದ್ದರೆ ಪರಿಶೀಲನೆ ಮಾಡೋಣ

ಶ್ರೀ ಎಚ್.ಎಲ್. ತಿಮ್ಮೇಗೌಡ.—ಒಂದೇ ನಗರದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ಎರಡು ರಸ್ತೆಗಳಿರುವುದಿಲ್ಲ. ಇರತಕ್ಕ ಪಂಚಾಯ್ತಿ ರಸ್ತೆಗಳನ್ನು ದುರಸ್ತಿ ಮಾಡಿಸುವುದಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ.—ಪರಿಶೀಲನೆ ಮಾಡೋಣ.

Completion of Bennithora Irrigation project.

11 SRI PRABHKAR TELKAR (Chittapur)—Will the Minister of State for Major and Medium Irrigation be pleased to state.—

(a) whether the Government are aware that Bennithora Irrigation Project is a Multipurpose Project, which requires to be completed early ;

(b) the amount spent over this project for the following years (1) 1978-79 to 1981-82 (Amount spent under each terms for each year may be furnished ;

(c) the amount required for completion of this project and provisions made for the same ;

(d) whether the Government are aware that several villages are being submerged and the action taken for settlement of these villages (Particulars of each villages and the amount of compensation earmarked for settlement of these villages)?

SRI B. B. CHIMMANA KATTI (Minister of State for Major and Medium Irrigation).—

(a) Yes.

(b) Statement is Appended.

ANNEXURE

Sl. No.	Sub-Heads	1978-79	1979-80	1980-81	1981-82	1982-8
1.	Project Establishment	8.06	7.10	8.46	9.67	
2.	Machinery and Equipment New Supplies	6.00	1.34	0 025	1.12	
	Repairs and Carriage	4 65	5.14	3.80	9.47	35.00 lakhs
3.	Suspense debits	64.54	17.04	10.63	26.86	Allotted
4.	Reservoir	1.98	0.45	—	—	
5.	Dam and Appartment works	55.58	25.65	9.97	19.10	
6.	Canals and Branches	9.48	28.75	9.041	47.04	
7.	Roads	12.57	3.53	3.155	7.00	
8.	Buildings	3.67	1.11	0.455	0.42	
	Suspense credits	44.06	21.31	11.070	23.71	
	D. R. C.	5.28	1.74	0.944	1,66	
9.	Canal works for relief of Drought.	—	—	1,280	0.98	
	Total	127.19	67.06	33.014	95.29	

(c) At the present cost, the amount required for completion of the project is Rs. 1110 lakhs.

(d) Four villages will be fully submerged and two villages will be partially submerged under Bennithora Project. Rehabilitation committee has been formed by the Government and Meetings have been conducted. Particulars of acquisition and amount of compensation etc., are yet to be determined.

SRI PRABHAKAR TELKAR.—Sir, I would like to know from the Hon. Minister for Major and Medium Irrigation, what will be the time required to complete this project according to the Planning Department.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ, ಬೆಣ್ಣೆತೊರೆ ಪ್ರಾಜೆಕ್ಟ್ ಬಗ್ಗೆ ನಾನು ನಿನ್ನೆಯ ದಿವಸ ಹೇಳಿದ ರೀತಿಯಲ್ಲಿ ೧೯೭೦ಕ್ಕೆ ಮುಗಿಸಬೇಕು ಎಂದು ನಾವು ಸೂಕ್ತ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಅಲ್ಲದೆ ಈ ಯೋಜನೆಗಾಗಿ ಆರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು ೧೦ ಕೋಟಿ ರೂಪಾಯಿಗಳನ್ನು ನಾವು ಇಟ್ಟಿದ್ದೇವೆ. ಇದರಲ್ಲಿ ಈಗಾಗಲೇ ನಾವು ೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇನ್ನು ಉಳಿದಿರತಕ್ಕ ೮ ಕೋಟಿ ರೂಪಾಯಿಗಳನ್ನು ಪ್ರತಿವರ್ಷದ ಆರ್ಥಿಕ ಪರಿಸ್ಥಿತಿಯನ್ನು ನೆ ೨ಡಿಕೊಂಡು ಹೆಚ್ಚಿನ ಹಣವನ್ನು ಒದಗಿಸಲಿಕ್ಕೆ ಪ್ರಯತ್ನ ಪಟ್ಟು ಈ ಯೋಜನೆಯನ್ನು ೧೯೭೦ಕ್ಕೆ ಮುಗಿಸಬೇಕು ಎಂಬ ಕಾರ್ಯಕ್ರಮ ಇದೆ.

SRI M.C. NANAIAH.—Sir, I am on a point of order. We are not able to hear the reply of the Hon. Minister since there is lot of group discussion going on and some of the Minister themselves have gone there after the announcements of elections. I do not understand, why they have become so scared.

(INTERRUPTION)

MR. SPEAKER.—There is no point of order.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳೂ, ಮಂತ್ರಿಗಳು ಅವರವರ ಯೋಜನೆಯಲ್ಲಿ ಅವರವರು ಕುಳಿತಿದ್ದಾರೆ, ತಾವು ಅವರನ್ನೇಕೆ ಡಿಸ್ಟರ್ಬ್ ಮಾಡುತ್ತೀರಿ ?

(ಗೊಂದಲ)

ಶ್ರೀ ಪ್ರಭಾಕರ್ ತೇಲ್ಕರ್.—ತಾವು ಈ ಯೋಜನೆಗೆ ೭೪ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಂದೂ ಹೇಳುತ್ತಿದ್ದೀರಿ, ನಾನು ತಮ್ಮನ್ನು ದಯಮಾಡಿ ಕೇಳುತ್ತಿದ್ದೇನೆ, ಇನ್ನುಳಿದಿರುವ ಮೂರು ತಿಂಗಳಲ್ಲಿ ಈ ಕೆಲಸವನ್ನು ಹೇಗೆ ಮುಗಿಸುತ್ತೀರಿ ? ಅಲ್ಲಿ ಈಗ ಯಾವ ಕೆಲಸಗಳೂ ನಡೆಯುತ್ತಿಲ್ಲ. ಇದನ್ನು ನೋಡಿದಾಗ ಈ ಯೋಜನೆಯನ್ನು ತಾವು ಯಾವ ಪ್ರಕಾರ ಮುಗಿಸುತ್ತೀರೋ ಗೊತ್ತಾಗುತ್ತಿಲ್ಲ ಇದನ್ನು ತಾವು ಸ್ವಲ್ಪ ವಿವರವಾಗಿ ಹೇಳಬೇಕು.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ, ಮೊದಲು ನಾವು ಈ ಯೋಜನೆಗೆ ೩೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೆವು. ನಂತರ ೩೫ ಲಕ್ಷ ರೂಪಾಯಿಗಳನ್ನು ಕೊಟ್ಟು, ಒಟ್ಟು ೭೦ ಲಕ್ಷ ರೂಪಾಯಿಗಳನ್ನು ಈ ಯೋಜನೆಗೆ ನಾವು ಖರ್ಚು ಮಾಡಿದ್ದೇವೆ. ಈಗ ಏನು ೭೦ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಯೋ ೨ದು ಸದುಪಯೋಗವಾಗುತ್ತಿದೆ. ಇದರಲ್ಲಿ ಹಣ ಲ್ಯಾಪ್ಸ್ ಆಗುವಂಥ ಪ್ರಶ್ನೆಯೇ ಬರುವುದಿಲ್ಲ ನಮ್ಮ ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ಈ ಯೋಜನೆ ಮೆಲ್ಪಪರ್ಪಸ್ ಆಗಿರುವುದರಿಂದ ಈಗಿರುವ ಪರಿಸ್ಥಿತಿಯಲ್ಲಿ ಡ್ಯಾಂ ಪೋರ್ಷನ್ ಕೆಲಸವನ್ನು ಮುಗಿಸಲಿಕ್ಕೆ ಕಾನ್ಸಂಟ್ರೇಟ್ ಮಾಡಿ ನಂತರ ಕೆನಾಲ್ ವರ್ಕ್ ಕೂಡ ಮಾಡುತ್ತೇವೆ.

ಶ್ರೀ ಪ್ರಭಾಕರ್ ತೇಲ್ಕರ್.—ಅಲ್ಲಿ ಈಗ ಕೆಲಸ ಮಾಡುವಂಥ ಸ್ಟಾಫ್ ಬಹಳ ಕಡಿಮೆ ಇದೆ. ಅಲ್ಲಿ ಸೂಪರಿಂಟೆಂಡಿಂಗ್ ಇಂಜಿನಿಯರ್ ಇಲ್ಲ, ಎಕ್ಸಿಕ್ಯುಟೀವ್ ಇಂಜನಿಯರ್ ಇಲ್ಲ. ಆದುದರಿಂದ ತಾವು ಯಾವ ರೀತಿಯಲ್ಲಿ ಕೆಲಸ ಮಾಡುತ್ತೀರಿ ಎನ್ನುವುದನ್ನು ಹೇಳಬೇಕು.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

MR. SPEAKER.—The question hour is over.

QUESTIONS FOR ANSWERS ON THE DAY
(but not taken up)

Hoarding of Essential Commodities.

111 SRI S.R. BOMMAI (Hubli Rural).—Will the Minister for Food and Civil Supplies be pleased to state.—